ಶ್ರೀ ಎಂ. ರಘುಪತಿ.—ಇದು ೨ ಖಾತೆಗಳಿಗೂ ಸಂಬಂಧಪಟ್ಟ ಪ್ರಶ್ನೆಯಾಗಿರುವುದರಿಂದ ನಾಳೆ ಅದರ ಬಗ್ಗೆ ಉತ್ತರವನ್ನು ಒದಗಿಸಿಕೊಡುವ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬರವರು ಸಭೆಯಲ್ಲಿ ಹಾಜರಿರಲಿಲ್ಲ.

ಜಮಖಂಡಿಯಲ್ಲಿ ಇಂಗಳಗಾಂವಿ ಎಂಬ ಉಪ ಶಿಕ್ಷಣಾಧಿಕಾರಿಯಿಂದ ಬಡ ಶಿಕ್ಷಕರಿಗೆ ಆಗುತ್ತಿರುವ ಕಿರುಕುಳದ ಬಗ್ಗೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಸನ್ಮಾನ್ಯ ಅಧ್ಯಕ್ಷರೇ, ಜಮಖಂಡಿಯಲ್ಲಿ ಇಂಗಳಗಾಂವಿ ಎಂದ ಉಪ ಶಿಕ್ಷಣಾಧಿಕಾರಿಯಿದ್ದು ಈ ಅಧಿಕಾರಿ ಇಲ್ಲಿಗೆ ಬಂದಾಗಿನಿಂದ ಬಡಶಿಕ್ಷಕರಿಗೆ ಅನೇಕ ರೀತಿಯಿಂದ ತೊಂದರೆ ಕೊಡುತ್ತಿದ್ದು ಈತನ ಭ್ರಷ್ಟಾಚಾರದ ಕುರಿತು ಶಿಕ್ಷಕವರ್ಗ ಬೇಸತ್ತು ಹೋಗಿದೆ. ಈ ಅಧಿಕಾರಿ ಲಂಚದ ಪ್ರತಿಮೂರ್ತಿಯೆಂತಿದ್ದು ಲಂಚಕ್ಕಾಗಿ ಆತನದೇ ಆದ ಒಂದು ರೇಟ್‌ಬೋರ್ಡ್ ಇದೆ. ಶಾಲೆಗಳ ತಪಾಸಣೆ ಮಾಡಲು ಈತ ಹಣ ಹಾಗೂ ಹೆಂಡ ಕೇಳುತ್ತಾನೆ ಈತನ ಮಗ ಎಲ್. ಐ. ಸಿ. ಏಜೆಂಟನಿದ್ದು ಮಗನಿಗೆ ಆತನ ಉದ್ಯೋಗದಲ್ಲಿ ನೆರವಾಗುವಂತೆ ಶಿಕ್ಷಕರ ಮೇಲೆ ಒತ್ತಾಯ ತಂದು ಸುಮಾರು ೫೦ ಲಕ್ಷ ರೂಪಾಯಿಗಳ ವಿಮಾ ಪಾಲಿಸಿ ಮಾಡಿದ್ದಾನೆ. ಯಾರು ಆತನ ಮಗನ ಹತ್ತಿರ ವಿಮಾ ಪಾಲಿಸಿ ಮಾಡಿಸುವುದಿಲ್ಲವೋ ಅಂಥವರಿಗೆ ಹಿಂಸೆ ಕೊಡುತ್ತಿದ್ದಾನೆ. ತನ್ನಿಂದ ಎಲ್.ಐ.ಸಿ. ಪ್ರೀಮಿಯಂ ತೆಗೆದುಕೊಳ್ಳದ ಕಾರಣಕ್ಕಾಗಿ ಆ ಅಧಿಕಾರಿಯ ಮಗ ಬಡಶಿಕ್ಷಕರೊಬ್ಬರ ಮೇಲೆ ಬೀದಿಯಲ್ಲಿ ಗೂಂಡಾಗಿರಿ ಮಾಡಿದ. ಈ ಅಧಿಕಾರಿಯ ಭ್ರಷ್ಟಾಚಾರ ಮತ್ತು ಆತ ಶಿಕ್ಷಣ ವರ್ಗಕ್ಕೆ ಕೊಡುವ ಕಿರುಕುಳದ ವಿರುದ್ಧ ತಾಲ್ಲೂಕ್ ಪ್ರಾಥಮಿಕ ಶಿಕ್ಷಕ ಸಂಘದವರು ಮೇಲಾಧಿಕಾರಿಗಳಿಗೆ ಬರೆದಿದ್ದು ಈ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಲು ಆಯುಕ್ತರಿಗೆ ತಿಳಿಸಿದ್ದಾಗಿ ಅವರು ಶಿಕ್ಷಕರ ಸಂಘಕ್ಕೆ ಬರೆದ ಉತ್ತರದಲ್ಲಿ ತಿಳಿಸಿದ್ದಾರೆ. ಈ ವಿಚಾರ ತಿಳಿದ ಮೇಲಂತೂ ಇಂಗಳಗಾಂವಿಯವರ ದಬ್ಬಾಳಿಕೆಗಳು ಮತ್ತಷ್ಟು ಹೆಚ್ಚಿವೆ. ಜಮಖಂಡಿಯಲ್ಲಿ ೪ ವರ್ಷ ಕಳೆದಿರುವ ಈ ಅಧಿಕಾರಿಯನ್ನು ಕೂಡಲೇ ಅಲ್ಲಿಂದ ವರ್ಗಾಯಿಸಬೇಕು. ಮತ್ತು ವರ್ಗಾಯಿಸುವ ಪೂರ್ವದಲ್ಲಿ ಆತ ಮಾಡಿದ ಭ್ರಷ್ಟಾಚಾರದ ಕುರಿತು ವಿಚಾರಣೆ ಮಾಡಿ ಸರಿಯಾದ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಶಿಕ್ಷಣ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್ —ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಮಾಡಿರುವ ಆಪಾದನೆಗಳ ಬಗ್ಗೆ ಆದಷ್ಟು ಜಾಗ್ರತೆ ವಿಚಾರಣೆ ಮಾಡಿ ಸೂಕ್ತ ಕ್ರಮ ತೆಗೆದುಕೊಂಡು ಅವರಿಗೆ ತಿಳಿಸುತ್ತೇನೆಂದು ಹೇಳುತ್ತೇನೆ.

ಶ್ರೀಯುತರುಗಳಾದ ಕೆ. ಕುಶಾಲ ಹಾಗೂ ಬಿ. ಲಕ್ಕಪ್ಪನವರು ಸಭೆಯಲ್ಲಿ ಹಾಜರಿರಲಿಲ್ಲವಾದ್ದರಿಂದ ಅವರ ನಿಯಮ ೩೫೪ರ ಕೆಳಗಿನ ಚರ್ಚೆಯನ್ನು ತೆಗೆದುಕೊಳ್ಳಲಾಗಲಿಲ್ಲ.

ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಅಧ್ಯಕ್ಷರೇ, ಸನ್ಮಾನ್ಯ ರಾಜ್ಯಪಾಲರು ದಯಪಾಲಿಸಿರುವ ಭಾಷಣದಲ್ಲಿ ಕರ್ನಾಟಕ ರಾಜ್ಯದ ಸಹಕಾರಿ ಸಂಘಗಳ ಮೂಲಕ ಮತ್ತು ಸಹಕಾರಿ ಬ್ಯಾಂಕಿನ ಮೂಲಕ ಪಡೆದಿರುವ ರೈತರ ಎಲ್ಲಾ ತರಹದ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿ (ದಿನಾಂಕ ೩೦-೬-೧೯೮೮ರ ಒಳಗೆ ಕಟ್ಟುವ ರೈತರು) ಮನ್ನಾ ಮಾಡಿರುವುದಾಗಿ ತಿಳಿಸಿರುತ್ತಾರೆ. ಆದರೆ ಸಂಬಂಧಪಟ್ಟ ಸಹಕಾರಿ ಸಂಘಗಳಿಗೆ ರೈತರು ಸಾಲದ ಅಸಲು ಕಟ್ಟಲು ಹೋದಾಗ ಕೇವಲ ಚಕ್ರಬಡ್ಡಿ ಮನ್ನಾ ಮಾಡಿರುವುದಾಗಿ ಹೇಳುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ಸ್ಪಷ್ಟ ಸರ್ಕಾರಿ ಆಜ್ಞೆ ಹೋಗಿದೆಯೆ? ಇದೇ ಸೌಲಭ್ಯವನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ರೈತರ ಸಾಲಕ್ಕೂ ಅನ್ವಯಿಸುವ ಬಗ್ಗೆ ಸರ್ಕಾರ ಏನಾದರೂ ಯೋಚಿಸಿದೆಯೇ ಎಂಬ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯಬಯಸುತ್ತೇನೆ.